
ಚಿಕ್ಕದಾಗಿದೆ. ಜನರ ದೃಷ್ಟಿ ಬದಲಾಗಿದೆ. ಪ್ರತಿ ತಿಂಗಳು ಜರ್ಮನ್ ಟೆಲಿವಿಶನಿನಲ್ಲಿ ಇಂಡಿಯಾದ ಬಗ್ಗೆ ಯಾವುದೊಂದು ಡಾಕ್ಯುಮೆಂಟರಿ ಫಿಲ್ಮ್ ಬರುತ್ತದೆ. ಜನ ಮನೆಯಲ್ಲಿ ಕೂತು ಇಂಡಿಯಾದಲ್ಲಿ ಏನು ನಡೀತಾ ಇದೆ ಅಂತ ತಿಳಿದುಕೊಳ್ಳುತ್ತಾರೆ. ನೂರು ವರ್ಷಗಳ ಹಿಂದೆ ಇಲ್ಲಿಂದ ಇಂಡಿಯಾಕ್ಕೆ ಯಾರೂ ಹೋದರೂ ಪ್ರಯಾಣ ಮಾಡುವ ಕಷ್ಟವಿತ್ತು. ಹೌದು, ವಸಾಹತುಶಾಹಿಯ ಸೈನಿಕರು ವ್ಯಾಪಾರಿಗಳು ಲಾಭಕ್ಕೋಸ್ಕರ ಹೋಗಿ ಬಂದರು. ಅಪರೂಪಕ್ಕೆ ಕೆಲವೇ ಕೆಲವು ಮಂದಿ ಚಿತ್ರಕಲಾವಿದರು, ಸಾಹಿತಿಗಳು ಕೂಡ ಹೋಗಿಬಂದರು. ಆದರೆ, ಹೆಚ್ಚಾಗಿ ಮೂರನೇ ದರ್ಜೆಯ ಜನರು ಮತ್ತು ಮತಪ್ರಚಾರಕರು ಈ ಕಷ್ಟದ ಪ್ರಯಾಣ ಮಾಡಿದರು. ಕಿಟೆಲ್ ಅವರ ಆತ್ಮಚರಿತ್ರೆ ಹೇಳುತ್ತದೆ, ಅವರು ಬಡತನದಲ್ಲಿ ಹುಟ್ಟಿದವರು ಅಂತ. ಆ ಕಾಲದಲ್ಲಿ ಬಡ ಕುಟುಂಬದಲ್ಲಿ ಹುಟ್ಟಿದ ಹುಡುಗನಿಗೆ ಎಂತಹ ಕೆಲಸ ಸಿಗಬಹುದಿತ್ತು? ಧಾರ್ಮಿಕ ಸಂಸ್ಥೆಯಲ್ಲಿ ಕೆಲಸ ಸಿಕ್ಕಿತು. ಬಾಸೆಲ್‌ನವರು ಹೇಳಿದರು, 'ನೀನು ಇಂಡಿಯಾಕ್ಕೆ ಹೋಗಿ ಇಂತಿಂಥ ಕೆಲಸಗಳನ್ನು ಮಾಡಿದರೆ ಒಂದು ಹುದ್ದೆ ಸಂಬಳ ಸಿಗುತ್ತದೆ'. ಮತ್ತು ಅವರು ಹಾಗೆ ಮಾಡಿದರು.




ಶಾಂತಿನಾಥ ದೇಸಾಯಿ ಅವರ ಕಾದಂಬರಿ 'ವಿಕ್ಷೇಪ'ದ ಇಂಗ್ಲಿಷ್ ಅನುವಾದ

◆ **ಆದರೆ, ಅವರು ಬಂದು ಮಾಡಿದ್ದು ಕನ್ನಡದ ಕೆಲಸ.**

ಅಧಿಕೃತವಾದ ಕೆಲಸ ಮತಪ್ರಚಾರ. ಅದರಲ್ಲಿ ಶೇಕಡ ನೂರು ಸೋತರು. ಅವರಿಂದ ಬಹುಪಾಲು ಜನರು ಕ್ರೈಸ್ತಮತಕ್ಕೆ ಬರಲಿಲ್ಲ. ಬಾಸೆಲ್‌ನಲ್ಲಿ ಮೇಲಧಿಕಾರಿಗಳು ಸಿಟ್ಟಿನಲ್ಲಿ ಪತ್ರಗಳನ್ನು ಬರೆದರು. 'ನೀನು ಅಲ್ಲಿ ಕೂತು ಏನೇನೊ ಸಾಹಿತ್ಯದ ಕೆಲಸಗಳನ್ನು ಮಾಡುತ್ತಿದ್ದೀಯಾ. ಆದರೆ, ನಿಜವಾದ ಕೆಲಸ ಏನು ಮಾಡಿದ್ದೀಯಾ ತೋರಿಸು'. ತೋರಿಸುವುದಕ್ಕೆ ಏನಿದೆ? ಏನಿಲ್ಲ. ಬಹುಶಃ ಕಿಟೆಲ್ ಅವರಿಗೆ ಮತಪ್ರಸಾರದಲ್ಲಿ ಹೆಚ್ಚು ಆಸಕ್ತಿ ಇರಲಿಲ್ಲ. ಅವರು ಭಾವುಕ ಮನುಷ್ಯರಾಗಿದ್ದರು. ಮುಗ್ಧವಾಗಿ ಇಂಡಿಯಾಕ್ಕೆ ಹೋದರು. ಅಲ್ಲಿ ನೆಲೆಸಿ ಭಾಷಿಕ, ಸಾಹಿತ್ಯಕ ಕೆಲಸ ಮಾಡಿದರು. ಕೊನೆಗೆ, 'ಯಾಕೆ ಮತಾಂತರ? ಈ ಜನರು ಚೆನ್ನಾಗಿದ್ದಾರೆ. ಹಾಗೆ ಇರಲಿ' ಎಂದು ಸುಮ್ಮನಾದರು. (ನಗು)

◆ **ಮಿಶನರಿಗಳು ಮಾಡಿದ ಈ ಕೆಲಸಗಳು ಇಲ್ಲಿನ ಇಂಡಾಲಜಿ ಅಧ್ಯಯನಗಳಲ್ಲಿ ಹೇಗೆ ಬಳಕೆಯಾಗುತ್ತಿವೆ?**

ಮತ್ತದೇ ಪ್ರಶ್ನೆ. ಆಧುನಿಕ ಭಾರತೀಯ ಭಾಷೆಗಳನ್ನು ಕಲಿಯುವುದರಿಂದ ಏನು ಪ್ರಯೋಜನ?